ಅಸಲು ದಾವಾ ನಂ.116/2017
ಪಿ ಡಬ್ಲು 1

ದಿನಾಂಕಃ 14-12-2018 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ_ಪಾಟಿ ಸವಾಲುಃ- ಪ್ರತಿವಾದಿ ಪರ ಶ್ರೀ ಎಸ್‌ಎಚ್‌ಬಿ ವಕೀಲರಿಂದ

ರಿ ಸ ನಂ. 76/1 ಬಿ ಜಮೀನಿಗೆ ಸಂಬಂಧಪಟ್ಟಂತೆ ಖರೀದಿ ಪತ್ರದ ದಾಖಲಾತಿಯನ್ನು ಪಡೆದುಕೊಂಡು ಈ ದಾವೆಯಲ್ಲಿ ನಾನು ಇವತ್ತಿನವರೆಗೂ ಹಾಜರಪಡಿಸಿಲ್ಲ ಎಂದರೆ ಸರಿ. ಈ ಆಸ್ತಿಯನ್ನು 32,000 ರೂ ಗಳಿಗೆ ನೂರಸಾಬ ಮರದಾನಸಾಬನ ಕಡೆಯಿಂದ ಖರೀದಿ ಹಿಡಿದಿರುವುದಾಗಿ ಹಾಗೂ ಹಣವನ್ನು ಸಂದಾಯ ಮಾಡಿರುವುದಾಗಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಖರೀದಿ ಪತ್ರವು 22,000 ರೂ ಗಳಿಗೆ ಖರೀದಿಯಾಗಿದ್ದು ಆ ಹಣವನ್ನು ನೀಡಿ ಅದೇ ದಿನ ಖರೀದಿ ಪತ್ರವನ್ನು ನೊಂದಣಿ ಮಾಡಿಕೊಂಡಿರುವನು ಎಂದರೆ ಸರಿಯಲ್ಲ.

ನನ್ನ ಅಣ್ಣ ಕುಟುಂಬದ ಹಿರಿಯನಾಗಿರುವುದರಿಂದ ಆತ ಹಿರಿತನ ಮಾಡುತ್ತಿದ್ದನು ಎಂದು ನಾನು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ವಾದ ಪತ್ರದ ವಂಶಾವಳಿಯ ಪ್ರಕಾರ 1 ನೇ ಪ್ರತಿವಾದಿ ನನ್ನ ಅಣ್ಣ 3 ನೇ ಗಂಡುಮಗನಾಗಿರುವನು ಎಂದರೆ ಸರಿಯಲ್ಲ. ಕರಿಮಖಾನ , ಅಮಾನಉಲ್ಲಾಖಾನ ಇವರಕ್ಕಿಂತ 1 ನೇ ಪ್ರತಿವಾದಿ ಚಿಕ್ಕವನಾಗಿರುವನು ಎಂದರೆ ಸರಿ. ಪ್ರತಿವಾದಿ 3 ಮತುತ 4 ರವರು ಮನೆತನದ ಹಿರಿತನವನ್ನು ಮಾಡಲು ನನ್ನ ತಂದೆ ಅವರಿಗೆ ಅಧಿಕಾರ ನೀಡಿರುವುದಿಲ್ಲ ಆದ್ದರಿಂದ ಅವರು ಹಿರಿತನ ಮಾಡಿರುವುದಿಲ್ಲ. ಈ ಸಂಗತಿಯನ್ನು ವಾದಪತ್ರದಲ್ಲಿಬರೆಸಿಲ್ಲ ಎಂದರೆ ಸರಿ. ಇಸ್ಲಾಂ ಧರ್ಮದ ಪ್ರಕಾರ ನನ್ನ ತಂದೆ ಜೀವಿತ ಅವಧಿಯಲ್ಲಿ ಮಕ್ಕಳು ಮನೆತನದ ಹಿರಿತನ ಮಾಡಲು ಅವಕಾಶವಿರುವುದಿಲ್ಲ ಎಂದರೆ ಸರಿಯಲ್ಲ. ಆತನಿಗೆ ಕಣ್ಣು ಕಾಣಿಸುತ್ತಿರಲಿಲ್ಲ ಆದ್ದರಿಂದ ಆತ ಮಾಡುತ್ತಿರಲಿಲ್ಲ. ನನ್ನ ತಂದೆ 1998 ರಲ್ಲಿ

ಮೃತಪಟ್ಟಿದ್ದು ಅದಕ್ಕಿಂತ ಪೂರ್ವದಲ್ಲಿ ಸುಮಾರು 30 ವರ್ಷಗಳಿಂದ 1 ನೇ ಪ್ರತಿವಾದಿ ಕುಟುಂಬದ ಹಿರಿತನ ಮಾಡುತ್ತಿದ್ದನು. ನನ್ನ ತಂದೆ ಮೃತಪಟ್ಟ ನಂತರ ಇಲ್ಲಿಯವರೆಗೂ ಸಹ 1 ನೇ ಪ್ರತಿವಾದಿ ಕುಟುಂಬದ ಹಿರಿತನ ಮಾಡುತ್ತಿರುವನು. ಕುಟುಂಬದ ಆಸ್ತಿಗಳಲ್ಲಿ ಪಾಲುವಾಟ್ನಿ ಮಾಡಿಕೊಂಡ ಬಗ್ಗೆ ಕಂದಾಯ ಅಧಿಕಾರಿಗಳಿಗೆ ಸಲ್ಲಿಸಿದ ವರದಿಯಲ್ಲಿ ವರದಿಯ ಡ ನಂ. 1252 ರ ಪ್ರಕಾರ 1994 ರವರೆಗೆ ನನ್ನ ತಂದೆಯ ಕುಟುಂಬದ ವ್ಯವಹಾರ ಮಾಡುತ್ತಿದ್ದನು ಬರೆದುಕೊಟ್ಟಿದ್ದೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ 17-18 ವಯಸ್ಸಿನಲ್ಲಿ ದೊಡ್ಡಪ್ಪನ ಮನೆಗೆ ಹೋದಾಗಿನಿಂದಲೂ ನಮ್ಮ ಜೊತೆ ಕೂಡಿ ವಾಸ ಆಗಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನ್ನ ದೊಡ್ಡಪ್ಪನ ಹಿರಿಯ ಮಗನ ಮಗಳ ಜೊತೆ ವಿವಾಹ ಮಾಡಿಕೊಂಡಿರುವುದರಿಂದ ಆತನ ವಿರುದ್ಧ ನನ್ನ ವೈರತ್ವ ಇತ್ತು ಎಂದರೆ ಸರಿಯಲ್ಲ. ಸರದಾರ ಖಾನ ಕುಲಕರ್ಣಿ ಇವರು ನನ್ನ ತಂದೆಯಿಹಿಂತ ಮೊದಲು ಮೃತಪಟ್ಟಿರುವರು ಎಂದರೆ ಸರಿ. ನಾವು ಇತನ ಶವಸಾಂಸ್ಕಾರದ ಅಂತಿಮ ಕ್ರಿಯೆಯಲ್ಲ ಭಾಗವಹಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಮತ್ತು 4 ನೇ ಪ್ರತಿವಾದಿ ಬಿ ಪಿ ಎಲ್ ಪಡಿತರ ಚೀಟಿ ಹೊಂದಿದ್ದೇವೆ ಎಂದರೆ ಸರಿಯಲ್ಲ. ಈ ಪಡಿತರ ಚೀಟಿಯನ್ನು ದಿನಾಂಕ 26-6-2015 ರ ಪೂರ್ವದಲ್ಲ ತಹಶೀಲ್ದಾರ ಸವಣೂರ ಅವರು ರದ್ದುಪಡಿಸಿರುವರು ಎಂದರೆ ಸಾಕ್ಷಿ ತನಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ. ಈ ವಿಷಯವಾಗಿ ನಾನು ನನ್ನ ಮತ್ತು 4 ನೇ ಪ್ರತಿವಾದಿ ಪರವಾಗಿ ದಿನಾಂಕ 26-6-2015 ರಂದು ಮಾಹಿತಿ ಹಕ್ಕು ಅಡಿ ನಿಯವುದಲ್ಲಿ ಈ ಪಡಿತರ ಚೀಟಿ ರದ್ದುಪಡಿಸಿರುವ ಬಗ್ಗೆ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಗ್ರಾಮದಲ್ಲಿ ನನ್ನ ಹೆಸರಿನ ವ್ಯಕ್ತಿ ನಾನೊಬ್ಬನೇ ಎಂದರೆ ಸರಿ. ನಾನು ದಿನಾಂಕ 26-6-2015 ರಂದು ಅರ್ಜಿ ಸಲ್ಲಿಸಿದರೂ ಸಹ ಈಗ ಅದು ನನಗೆ ವಿರುದ್ಧ ಆಗುವದು ಎಂಬ ಕಾರಣದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ

ಎಂದು ಸೂಚಿಸುವುದು ಸರಿಯಲ್ಲ. ಆದರೆ ತಾನು ರೇಷನ್ ಕಾರ್ಡ ಸಲ್ಲಿಸುವ ಸಲುವಾಗಿ ಅರ್ಜಿ ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. ನನ್ನ ತಂದೆಯ ಕಡೆಯಿಂದ ಬಂದಿರುವಂತಹ ಆಸ್ತಿಯ ಒಟ್ಟು ವಿಸ್ತೀರ್ಣ 16 ಎಕರೆ 39 ಗುಂಟೆ ಆಗುವದು ಎಂದರೆ ಸರಿ. ಆ ಅರ್ಜಿಯಲ್ಲಿ ನಮ್ಮ ಮನೆತನಕ್ಕೆ 16 ಎಕರೆ ಜಮೀನು ಇರುವುದಾಗಿ ಎಂದು ನಮೂದು ಮಾಡಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಒಟ್ಟು 32 ಎಕರೆ ಜಮೀನು ಇರುವುದಾಗಿ ಎಂದು ನಮೂದು ಮಾಡಿರುವುದು ಎಂದು ಸಾಕ್ಷಿ ಉತ್ತರಿಸುತ್ತಾರೆ. ಆ ಅರ್ಜಿಯಲ್ಲಿ 1 ನೇ ಪ್ರತಿವಾದಿ ಮತ್ತು ಆತನ ಹೆಂಡತಿ ಮತ್ತು ಮಕ್ಕಳ ಆಸ್ತಿ ಆಗಿರುವುದರಿಂದ ಉಳಿದ 16 ಎಕರೆಯ ಜಮೀನುಗಳನ್ನು ದಿನಾಂಕ 26-06-2015 ರ ಅರ್ಜಿಯಲ್ಲಿ ನಾನು ಕಾಣಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ಕಾರಣದಿಂದ ನಾನು ಮಾಹಿತಿ ಹಕ್ಕಿನ ಅಡಿಯಲ್ಲಿ ತಹಶೀಲ್ದಾರ ಸವಣೂರ ಇವರಿಗೆ ಅರ್ಜಿ ಸಲ್ಲಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 18 ರದಾಖಲೆಯಲ್ಲಿನ ಆಸ್ತಿಯು ಬಸವಂತರಾವ ಮರಾಠೆ ಇವರ ಕಡೆಯಿಂದ ಬಂದಿರುವುದು. ನಿಪಿ 21 ರ ದಾಖಲೆಯಲ್ಲಿನ ಆಸ್ತಿಯು ಬಸವಂತರಾವ ಮರಾಠೆ ಇವರ ಕಡೆಯಿಂದ ಬಂದಿರುವುದು. ಈ ಆಸ್ತಿಯನ್ನು ಸುಮಾರು 25 ವರ್ಷಗಳ ಹಿಂದೆ ಖರೀದಿ ಹಿಡಿದಿರುವುದು. ಈ ಎರಡು ಆಸ್ತಿಗಳನ್ನು 1 ಲಕ್ಷಕ್ಕಿಂತಲೂ ಹೆಚ್ಚಿನ ಮೌಲ್ಯಕ್ಕೆ 1 ನೇ ಪ್ರತಿವಾದಿ ಖರೀದಿ ಮಾಡಿರುವನು.1994-95 ನೇ ಸಾಲಿನಿಂದಲೂ ನಮ್ಮ ಮತ್ತು 1 ನೇ ಪ್ರತಿವಾದಿಯ ನಡುವೆ ಸಂಬಂಧ ಚೆನ್ನಾಗಿ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಎರಡು ಆಸ್ತಿಗಳನ್ನು 1 ನೇ ಪ್ರ ತಿವಾದಿ ತನ್ನ ಸ್ವಂತ ಹಣದಿಂದ ಖರೀದಿ ಹಿಡಿದಿರುವನು ಎಂದರೆ ಸರಿಯಲ್ಲ. ಈ ಜಮೀನಿಗೆ ಸಂಬಂಧಪಟ್ಟಂತೆ ಖರೀದಿ ವ್ಯವಹಾರದ ಬಗ್ಗೆ ನನಗೆ ಯಾವುದೆ ಮಾಹಿತಿ ಇರವುದಿಲ್ಲ ಏಕೆಂದರೆ ಆತನು ಮನೆತನದ ಹಿರಿತನ ಮಾಡುತ್ತಿದ್ದರಿಂದ. ಈ ಆಸ್ತಿಯನ್ನು ಖರೀದಿ ಮಾಡುವ

ಸಮಯದಲ್ಲಿ 1 ನೇ ಪ್ರತಿವಾದಿಯನ್ನು



ಹೊರತುಪಡಿಸಿ ಬೇರೆ ಯಾರು ಹೋಗಿಲ್ಲ. ಆ ಖರೀದಿ ಪತ್ರದ ಮೇಲೆ ಸಾಕ್ಷಿದಾರರೆಂದು ಯಾರು ಸಹಿ ಮಾಡಿರಬಹುದು ಎಂಬುದರ ಬಗ್ಗೆ ಸಹ ನನಗೆ ಗೊತ್ತಿಲ್ಲ.ಈ ಆಸ್ತಿಯ ಖರೀದಿ ಪತ್ರದ ದೃಡೀಕೃತ ನಕಲನ್ನು ಹಾಜರಪಡಿಸಿಲ್ಲ ಎಂದರೆ ಸರಿ. ನಿಪಿ 20 ರ ಆಸ್ತಿಯನ್ನು 24 ವರ್ಷಗಳ ಹಿಂದೆ ಖರೀದಿ ಹಿಡಿದಿರುವುದು ಮತ್ತು ಎಷ್ಟು ಹಣಕ್ಕೆ ಹಿಡಿದಿರಬಹುದು ಎಂದು ನನಗೆ ಗೊತ್ತಿಲ್ಲ ಖರೀದಿಪತ್ರವನ್ನು ನಾನು ನೋಡಿರುವುದಿಲ್ಲ ಮತ್ತು ಹಾಜರಪಡಿಸಿಲ್ಲ. ಈ ಆಸ್ತಿಯ ಖರೀದಿ ಪತ್ರದ ಬಗ್ಗೆ ನಮ್ಮ ವಕೀಲರಿಗೆ ನಾನು ಹೇಳಿರಲಿಲ್ಲ. ಈ ಆಸ್ತಿಯನ್ನು 1 ನೇ ಪ್ರತಿವಾದಿ ಅದರ ಮಾಲೀಕರಾದ 1.ಕರಿಮಖಾನ , 2.ಮೆಹಬೂಬಖಾನ ತಂದೆ ರಸೂಲಖಾನ ಕುಲಕರ್ಣಿ ಇವರ ಕಡೆಯಿಂದ ದಿನಾಂಕ 07-05-1992 ರಂದು ಖರೀದಿ ಕರಾರು ಪತ್ರವನ್ನು ಮಾತ್ರ ಮಾಡಿಕೊಂಡಿರುವುದು ಎಂದರೆ ಸಾಕ್ಷಿ ತನಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ. ಈ ಖರೀದಿ ಕರಾರು ಪತ್ರದ ಆಧಾರದ ಮೇರೆಗೆ ದಿನಾಂಕ 09-11-1998 ರಂದು ವರದಿಯನ್ನು ನೀಡಿದ್ದು ಆ ಪ್ರಕಾರ ಕಂದಾಯ ಅಧಿಕಾರಿಗಳು ಡ.ನಂ.1387 ಮಂಜೂರು ಮಾಡಿ 1 ನೇ ಪ್ರತಿವಾದಿ ಮಾಲೀಕನೆಂದು ಹಕ್ಕು ಬದಲಾವಣೆ ಮಾಡಿರುವರು ಎಂದರೆ ಸರಿ. ರಿ ಸನಂ.74ಃ 5 ನಿಪಿ 19 ರ ಆಸ್ತಿಯನ್ನು 1973-74 ರಲ್ಲಿ ಖರೀದಿ ಮಾಡಿದ್ದು ಸಾಕ್ಷಿ ಪುನಃ ನುಡಿಯುವುದೆನೆಂದರೆ 1994-95 ರಲ್ಲಿ ನನ್ನ ಅಕ್ಕನ ಮಗನಾದ ಮುನೀರಭಾಷನ ಹೆಸರಿನಲ್ಲಿ ಖರೀದಿ ಮಾಡಿರುವರು. ಈ ಸಂಗತಿಯನ್ನು ನನ್ನ ವಾದ ಪತ್ರದಲ್ಲಿ ಹೇಳಿ ಬರೆಸಿಲ್ಲ. ಈ ಆಸ್ತಿಯನ್ನು ದಿನಾಂಕ 21-05-1991 ರಲ್ಲಿ ಖರೀದಿ ಮಾಡಿರುವರು ಎಂದರೆ ಸಾಕ್ಷಿ ತನಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ, 1 ನೇ ಪ್ರತಿವಾದಿಯ ಆಸ್ತಿಗಳನ್ನು ಲಪಟಾಯಿಸುವ ಉದ್ದೇಶದಿಂದ ನಾನು ಮತ್ತು ಉಳಿದ ಪ್ರತಿವಾದಿಯರು 1 ನೇ ಪ್ರತಿವಾದಿ ಕುಟುಂಬದ ಹಿರಿತನ ಮಾಡುತ್ತಿದ್ದನ್ನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಿ ಸನಂ. 50/14 ರ ನಿಪಿ 17 ರಲ್ಲಿರುವ

ಜಮೀನಿನಲ್ಲಿ ಎಷ್ಟು ಎಕರೆ ಮತ್ತು ಗುಂಟೆ ಜಮೀನನ್ನು ಖರೀದಿ



ಮಾಡಿರುವ ಎಂಬ ಪ್ರಶ್ನೆಗೆ ಸಾಕ್ಷಿ 2 ಎಕರೆ ಗಿಂತಲೂ ಹೆಚ್ಚಿನ ಜಮೀನು ಖರೀದಿ ಮಾಡಿರುವನು. ಈ ಆಸ್ತಿಯನ್ನು ಯಾವ ವರ್ಷದಲ್ಲಿ ಎಷ್ಟು ಸಾವಿರ ರೂಗಳಿಗೆ 1 ನೇ ಪ್ರತಿವಾದಿ ಖರೀದಿ ಹಿಡಿದಿರುವನು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಈ ಖರೀದಿ ವ್ಯವಹಾರದ ಬಗ್ಗೆ ಮತ್ತು ಹಣ ನೀಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. ಆ ಖರೀದಿ ಪತ್ರದಲ್ಲಿ ಯಾರು ಸಾಕ್ಷಿದಾರರೆಂದು ಸಹಿ ಮಾಡಿರುವವರು ಮತ್ತು ಯಾರ ಸಮಕ್ಷಮದಲ್ಲಿ ವ್ಯವಹಾರ ಆಗಿರುವುದು ಎಂಬುವುದರ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ಆಸ್ತಿಯನ್ನು 1 ನೇ ಪ್ರತಿವಾದಿ ಕುಮಾರಸ್ವಾಮಿ ಅಂಗಡಿ ಹಿರೇಮಠ ಇವರಿಗೆ ಖರೀದಿ ನೀಡಿರುವರು. ಈ ಆಸ್ತಿಯನ್ನು ನನ್ನ ವಾದ ಪತ್ರದಲ್ಲಿ ಹಾಗೂ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ 1 ನೇ ಪ್ರತಿವಾದಿಯು ಶೌಖತಅಲಿ ಖಾನಗೆ ಮಾರಾಟ ಮಾಡಿರುವನು ಎಂದು ನಾನು ಹೇಳಿ ಬರೆಸಿಲ್ಲ. ಈ ಆಸ್ತಿಗೆ ಸಂಬಂಧಪಟ್ಟಂತೆ ಖರೀದಿ ಹಿಡಿದಿರುವ ಮತ್ತು 1 ನೇ ಪ್ರತಿವಾದಿ ಮಾರಾಟ ಮಾಡಿರುವ ಖರೀದಿ ಪತ್ರಗಳನ್ನು ಹಾಜರಪಡಿಸಿಲು ಮತ್ತು ನಮ್ಮ ವಕೀಲರಿಗೆ ನನಗೆ ಯಾವುದೆ ತೊಂದರೆ ಇರಲಿಲ್ಲ. ಈ ಆಸ್ತಿಯನ್ನು 1 ನೇ ಪ್ರತಿವಾದಿ ದಿನಾಂಕ 21-06-2004 ರಂದು ತನ್ನ ಸ್ವಂತ ಹಣದಿಂದ ಖರೀದಿ ಹಿಡಿದಿರುವನು ಎಂದರೆ ಸರಿಯಲ್ಲ. ದಾವಾ ಆಸ್ತಿಯ ರಿ ಸನಂ. 76/1 ಎ ಈ ಆಸ್ತಿಯನ್ನು 1 ನೇ ಪ್ರತಿವಾದಿ ತನ್ನ ಮಗನ ಹೆಸರಿನಲ್ಲಿ ಖಾದರಖಾನ ತಿಳುವಳ್ಳಿ ಕಡೆಯಿಂದ ಖರೀದಿ ಹಿಡಿದಿರುವನು. ಈ ಆಸ್ತಿಯ ಖರೀದಿ ವವಹಾರದ ಬಗ್ಗೆ ನನಗೆ ಯಾವುದೆ ಮಾಹಿತಿ ಇರುವುದಿಲ್ಲ, ಈ ಖರೀದಿಯ ಸಮಯದಲ್ಲಿ ನಮ್ಮ ಗ್ರಾಮದವರು ಯಾರು ಯಾರು ಭಾಗವಹಿಸಿರುವರು ಎಂಬುವುದರ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ 18 ಮತ್ತು 21 ರ ದಾಖಲೆಗಳು ಆಸ್ತಿಗಳು ಈ ದಾವೆ ದಾಖಲು ಮಾಡುವ ಸಮಯದಲ್ಲಿ 1 ನೇ ಪ್ರತಿವಾದಿಯ ಮಕ್ಕಳ ಹೆಸರಿನಲ್ಲಿ ಇದ್ದವು. ಈ ಆಸ್ತಿಗಳನ್ನು

1 ನೇ ಪ್ರತಿವಾದಿ ತನ್ನ ಮಕ್ಕಳ ಹೆಸರಿನಲ್ಲಿ ವರ್ಗಾವಣೆ ಮಾಡುವಾಗ



ನಾವು ತಕರಾರು ಮಾಡಿರುವುದಿಲ್ಲ ಏಕೆಂದರೆ ಅದರ ಬಗ್ಗೆ ನಮಗೆ ಮಾಹಿತಿ ಇರಲಿಲ್ಲ. ಈ ಎಲ್ಲ ಆಸ್ತಿಗಳು 1 ನೇ ಪ್ರತಿವಾದಿಯ ಸ್ವಂತ ಮಾಲೀಕತ್ವದ ಆಸ್ತಿಗಳು ಆಗಿರುವುದರಿಂದ ಆ ಕಾರಣಕ್ಕಾಗಿ ನಾವು ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ.ಈ ಆಸ್ತಿಗಳನ್ನು ವರ್ಗಾವಣೆ ಮಾಡಿರತಕ್ಕಂತ ಹೆಸರಿನ ವ್ಯಕ್ತಿಗಳನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿಲ್ಲ ಎಂದರೆ ಸ ರಿ.

ನಿಪಿ 26 ರ ದಾಖಲಾತಿ ಆಸ್ತಿಯನ್ನು ಯಾರು ಯಾರಿಂದ ಯಾವಾಗ ಖರೀದಿ ಹಿಡಿದಿರುವುದರ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ಆಸ್ತಿಯನ್ನು ಯಾರು ಎಷ್ಟು ಹಣಕ್ಕೆ ಯಾರ ಸಮಕ್ಷಮದಲ್ಲಿ ಖರೀದಿ ಹಿಡಿದಿರಬಹುದು ಎಂದು ನನಗೆ ಗೊತ್ತಿಲ್ಲ. ಆದರೆ 1 ನೇ ಪ್ರತಿವಾದಿ ಈ ಆಸ್ತಿಯನ್ನು ಖರೀದಿ ಹಿಡಿದಿದ್ದಾನೆ. 1 ನೇ ಪ್ರತಿವಾದಿ ಆಸ್ತಿಯನ್ನು ಖರೀದಿ ಹಿಡಿದ ಬಗ್ಗೆ ಯಾವುದೆ ದಾಖಲೆ ಹಾಜರಪಡಿಸಿಲ್ಲ. ಈ ಆಸ್ತಿಗೆ ಸಂಬಂಪಟ್ಟಂತೆ ಯಾವುದೆ ಖರೀದಿ ಪತ್ರ ಅಗಿರುವುದಿಲ್ಲ ಸದರಿ ಆಸ್ತಿಯ ಮೂಲ ಮಾಲೀಕ 1 ನೇ ಪ್ರತಿವಾದಿ ಸಂಬಂಧ ಕೇವಲ ವರದಿಯ ಮೂಲಕ ದಿನಾಂಕ 23-10-1999 ರ ಟರಾವಿನ ಮೂಲಕ ಮಾತ್ರ ವರ್ಗಾವಣೆ ಆಗಿರುವುದು ಎಂದರೆ ಸಾಕ್ಷಿ ತನಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ. 1 ನೇ ಪ್ರತಿವಾದಿ ತನ್ನ ವೈಯಕ್ತಿಕ ಆಸ್ತಿಗೆ ಸಂಬಂಧಪಟ್ಟಂತೆ ವ್ಯವಹಾರ ಮಾಡಿಕೊಂಡಿರುವುದರಿಂದ ಆ ಕಾರಣಕ್ಕಾಗಿ ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿ ಪಿ ಸಿ ನಂ. 90 ,91 ರ ಆಸ್ತಿಗಳನ್ನು ಯಾರು ಯಾವಾಗ ಯಾರ ಕಡೆಯಿಂದ ಖರೀದಿ ಮಾಡಿರುವುದು ಎಂದು ನನಗೆ ಗೊತ್ತಿಲ್ಲ. ಈ ಆಸ್ತಿಗೆ ಸಂಬಂದಪಟ್ಟಂತೆ 1 ನೇ ಪ್ರತಿವಾದಿ ತನ್ನ ವೈಯಕ್ತಿಕ ನಾತೆಯಿಂದ ವ್ಯವಹಾರ ಮಾಡಿರುವುದರಿಂದ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಈ ಎರಡು ಆಸ್ತಿಗಳು 1 ನೇ ಪ್ರತಿವಾದಿ ಖರೀದಿ ಹಿಡಿದಿರುವಾಗ ಎಂದು ನಮ್ಮ ವಕೀಲರಿಗೆ ನಾನು ಮಾಹಿತಿ

ನೀಡಿರುವುದಿಲ್ಲ. ಆಸ್ತಿ ನಂ. 90 ಅಬ್ದುಲ , ಅಹಮದಸಾಬ, ಮರದಾನಸಾಬ



ಮತ್ತು ಹಸನಸಾಬ ತಂದೆ ನೂರಸಾಬ ನಧಾಪ ಇವರ ಮಾಲ್ಕಿ ಆಸ್ತಿ ಎಂದರೆ ಸರಿಯಲ್ಲ. ಈ ಆಸ್ತಿಗೆ ಈ 4 ಜನರು ಮಾಲೀಕರು ಎಂದು ಪಂಚಾಯತಿಯಲ್ಲಿ ದಿನಾಂಕ 11-12-1998 ರಂದು ಠರಾವ ಮೂಲಕ 2 ನೇ ಪ್ರತಿವಾದಿಯ ಹೆಸರಿನಲ್ಲಿ ಮಾಲೀಕತ್ವದ ಹಕ್ಕನ್ನು ಬದಲಾವಣೆ ಮಾಡಿಸಿರುವರು ಎಂದರೆ ಸಾಕ್ಷಿ ತನಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿ ನಿಪಿ 25 ರ ದಾಖಲೆಯ ಆಸ್ತಿಯು ಮೊದಲಿಗೆ ಯಲ್ಲಪ್ಪ ನಿಂಗಪ್ಪ ಮಡಿವಾಳರ ಇವರಿಗೆ ಸಂಬಂಧಿಸಿರುವ ಆಸ್ತಿ ಎಂದರೆ ಸರಿ. ಈ ಆಸ್ತಿಯನ್ನು 2 ನೇ ಪ್ರತಿವಾದಿ ಹೆಸರಿನಲ್ಲಿ ಪಂಚಾಯತಿಯಲ್ಲಿ ಠರಾವಿನ ಮೂಲಕ ಹಕ್ಕು ಬದಲಾವಣೆ ಮಾಡಿಸಿರುವನು ಎಂದರೆ ಸಾಕ್ಷಿ ತನಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ ದಾವಾ ಶೆಡ್ಯೂಲ್ ಬಿ 2 ಮತ್ತು 3 ಆಸ್ತಿಗಳನ್ನು ಖರೀದಿ ಹಿಡಿದಿರುವುದಾಗಿ ಎಂದು ನಾನು ಸುಳ್ಳು ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ . ಈ ಎಲ್ಲ ಆಸ್ತಿಗಳು 1 ನೇ ಪ್ರತಿವಾದಿ ಆತನ ಹೆಂಡತಿ ಮತ್ತು ಮಕ್ಕಳಿಗೆ ಸಂಬಂದಪಟ್ಟಿರುವಂತಹ ಆಸ್ತಿಗಳು ಆಗಿರುವದಿಲ್ಲ ಎಂದರೆ ಸರಿಯಲ್ಲ.

ದಾವಾ ಶೆಡ್ಯೂಲ್ ಬಿ ದಲ್ಲಿ ನ ಆಸ್ತಿ ಕ್ರಮ ಸಂಖ್ಯೆ 1 ವಿ ಪಿ ಸಿ ನಂ. 223 ರ ವರ್ಣನೆಯ ಆಸ್ತಿಯು ಅಸ್ತಿತ್ವದಲ್ಲಿ ಇರುವುದಿಲ್ಲ ಅದನ್ನು 1 ನೇ ಪ್ರತಿವಾದಿಂದು ಖರೀದಿ ಹಿಡಿದಿರುವುದಿಲ್ಲ ಎಂದರೆ ಸಾಕ್ಷಿಯು ನುಡಿಯುವುದೆನೆಂದರೆ ಈ ಆಸ್ತಿಯು ಅಸ್ತಿತ್ವದಲ್ಲಿ ಇರುವುದು ಆದರೆ ಅದನ್ನು ಖರೀದಿ ಮಾತ್ರ ಮಾಡಿಕೊಂಡಿಲ್ಲ ಎಂದು ಉತ್ತರಿಸುತ್ತಾರೆ, ವಿಸಿ ನಂ. 222 ರ ಆಸ್ತಿಯ ಕಾತ ಉತಾರ ಸಹಿತ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ 23 ರ ದಾಖಲಾತಿಯು ವಿ ಪಿ ಸಿ ನಂ. 223ಃ2 ಬಿ ಆಸ್ತಿಯು 3 ನೇ ಪ್ರತಿವಾದಿಯ ಮಾಲೀಕತ್ವಕ್ಕೆ ಸಂಬಂದ ಪಟ್ಟ ಆಸ್ತಿಯಾಗಿರುವುದು ಎಂದರೆ ಸರಿ. ವಿ ಪಿಸಿ ನಂ.223 ರ ಆಸ್ತಿಯು 3 ನೇ

ಪ್ರತಿವಾದಿಯ ಆಸ್ತಿಯಾಗಿರುವುದು ಎಂದರೆ ಸರಿ.ಈ ಆಸ್ತಿಯನ್ನು 3 ನೇ ಪ್ರತಿವಾದಿ ತನ್ನ ಹೆಂಡತಿಯ ಹೆಸರನಲ್ಲಿ, ತನ್ನ ಹೆಂಡತಿಯ ಹಿರಿಯ ಮಗನ ಹೆಂಡತಿಯ



ಹೆಸರಿನಲ್ಲಿ , 3 ನೇಯ ಪ್ರತಿವಾದಿಯ ಹೆಸರಿನಲ್ಲಿ ಹಾಗೂ 2 ನೇಯ ಮಗನ ಹೆಂಡತಿಯ ಹೆಸರಿನಲ್ಲಿ ದಾಖಲಾಗಿರುವವು ಎಂದರೆ ಸರಿ. ಇವರನ್ನು ಈ ದಾವೆಯಲ್ಲಿ ಪಕ್ಷಗಾ ರನಾಗಿ ಸೇಪರ್ಡೆ ಮಾಡಿಲ್ಲ ಎಂದರೆ ಸರಿ.

ನಮ್ಮ ಗ್ರಾಮದ ಮರದನಾಬಿ ಕಾಶೀಸಾಬ ಮುಳಗುಂದ ಇವರ ಪರಿಚಯವಿದೆ. ಇವರು ಈಗ ಸವಣೂರಿನ ತಾಲೂಕಿನ ಕಡಕೋಳ ಗ್ರಾ ಮದಲ್ಲಿ ವಾಸವಾಗಿರುವಳು ಎಂದರೆ ಸರಿಯಲ್ಲ. ಆದರೆ ಅವಳು ಸೊರಬ ತಾಲೂಕಿನಲ್ಲಿ ವಾಸವಾಗಿರುವಳು. ನಾನು ಸುಮಾರ 20 ವರ್ಷಗಳ ಹಿಂದೆ ಮರದಾನಬಿಯ ಮಾಲೀಕತ್ವದ ಆಸ್ತಿ ನಂ. 238ಃ2 ರ ಖುಲ್ಲಾ ಜಾಗ ಮತ್ತು ಮನೆಯನ್ನು ಖರೀದಿ ವವಹಾರ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಇವಳು ನೂರಅಹಮದ ಖಾನ ಸರದಾರ ಖಾನ ಕುಲಕರ್ಣಿ ಇವರಿಗೆ 60 X 56 ಪೀಟಿನ ಜಾಗೆಯನ್ನು ಮಾರಾಟ ಮಾಡಿರುಗಳು ಎಂದರೆ ಸಾಕ್ಷಿಯು ತನಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ. ಈ ಮರದಾನಬಿ ಮತ್ತು ನೂರಅಹಮದ ಖಾನ ಜೊತೆ ತಂಟೆ ಮಾಡಿದಾಗ ಗಾರಮದಲ್ಲಿ ಹಿರಿಯರು ಪಂಚಾಯತಿ ಸೇರಿ ನನ್ನ ಹೆಡಂತಿಗೆ 46 X60 ರ ಜಾಗೆಯನ್ನು ಹಾಗೂ ನೂರಅಹಮದ ಅವನಿಗೆ 56 X 60 ರ ವಿಸ್ತೀರ್ಣದ ಜಾಗೆಯನಲುನ ನೀಡಿ ದಿನಾಂಕ 04-01-2003 ರಂದು ಪಂಚಾಯತಿಯಲ್ಲಿ ಠರಾವು ಮಾಡಿ ನನ್ನ ಹೆಂಡತಿ ಹೆಸರಿನಲ್ಲಿ ಹಾಗೂ ನೂರಅಹಮದ ಹೆಸರಿನಲ್ಲಿ ದಾಖಲು ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ಹೆಂಡತಿ ಹೆಸರು ನಜಗುಣಿಸಾ ಎಂದರೆ ಸರಿ. ನನ್ನ ಹೆಸರಿನ ಹೆಂಡತಿ ಹೆಸರಿನಲ್ಲಿ ವಿಸ್ತೀರ್ಣ 46X 60 ರ ಜಾಗೆಯು ವಿಪಿಸಿ ನಂ. 238ಃ1 ಬ ಉತಾರ ಆಗಿರುವದು ಎಂದರೆ ಆಗಿರಬಹುದು ಎಂದು

ಉತ್ತರಿಸುತ್ತಾರೆ. ಈ ಆಸ್ತಿಯನ್ನು ದಾವಾ ಆಸ್ತಿಯನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.





ಹಿಂದೂ ಸಮಾಜದಲ್ಲಿ ಹಾಗೂ ಮುಸ್ಲಿಂ ಸಮಾಜದಲ್ಲಿ ಕುಟುಂಬದ ಸದಸ್ಯರೆಲ್ಲರೂ ಒಟ್ಟಿಗೆ ಆಗಿ ದ್ದ ಸಮಯದಲ್ಲಿ ವಿವಾಹಂ ಕಾರ್ಯಕ್ರಮಗಳಲ್ಲಿ ಆಮಂತ್ರ ಣ ಪತ್ರಿಕೆಗಳನ್ನು ಕುಟುಂಬದ ಹಿರಿಯನ ಹೆಸರಿನಲ್ಲಿ ಮುದ್ರಣ ಮಾಡುತ್ತಾರೆ ಎಂದರೆ ಸರಿ. ನನಗೆ ಖುರುಸೀದಬೇಗಂ ಎಂಬ ಹೆಸರಿನ ಮಗಳು ಇರುವಳು ಎಂದರೆ ಸರಿ. ಇವಳನ್ನು ಶಿಗ್ಗಾಂವಿಯ ಕಾಜಾ ಮೈನುದ್ದೀನ ನೀರಮಣಿ ಎಂಬುವನು ಜೊತೆಗೆ ದಿನಾಂಕ 03-05-2015 ವಿವಾಹ ಮಾಡಿಕೊಟ್ಟಿದ್ದೇನೆ ಎಂದರೆ ಸರಿ.ಆ ವಿವಾಹದ ಆಮಂತ್ರ ಣ ಪತ್ರಿಕೆಯನ್ನು ನನ್ನ ಹೆಸರಿನಲ್ಲಿ ಮುದ್ರ ಣ ಮಾಡಿದ್ದೇನೆ ಎಂದರೆ ಸರಿ. ಅವಳು ನನ್ನ ಮಗಳು ಆಗಿರುವುದರಿಂದ ನನ್ನ ಹೆಸರಿನಲ್ಲಿ ಆ ವಿವಾಹದ ಆಮಂತ್ರ ಣ ಪತ್ರಿಕೆಯನ್ನು ಮಾಡಿದ್ದೇನೆ ಈ ವಿವಾಹದ ಆಮಂತ್ರ ಣ ಪತ್ರಿಕೆಯನ್ನು ವ್ಯವಹಾರ ನೋಡಿಕೊಂಡು ಹೋಗುತ್ತಿರುವ 1 ನೇ ಪ್ರತಿವಾದಿಯ ಹೆಸರಿನಲ್ಲಿ ಮಾಡಿಸಿರುವುದಿಲ್ಲ ಎಕೆಂದರೆ ನಾನು ಮತ್ತು 1 ನೇ ಪ್ರತಿವಾದಿ ಬೇರೆಯಾಗಿದ್ದರಿಂದ ಆತ ನನ್ನ ಮಕ್ಕಳ ಮದುವೆ ಮಾಡಿಸುವುದಿಲ್ಲ ಎಂದು ಹೇಳಿದ್ದರಿಂದ. ಅದೇ ರೀತಿ 1 ನೇ ಪ್ರತಿವಾದಿಯಕ್ಕಿಂತಲೂ ವಯಸ್ಸಿನಲ್ಲಿ ಹಿರಿಯನು ಅಗಿರುವಂತಹ 3 ಮತ್ತು 4 ನೇ ಪ್ರತಿವಾದಿಯ ಹೆಸರಿನಲ್ಲಿಯೂ ಸಹ ಈ ವಿವಾಹದ ಆಮಂತ್ರ ಣ ಪತ್ರಿಕೆಯನ್ನು ಮುದ್ರಿಸಿರುವುದಿಲ್ಲ ಎಕೆಂದರೆ ಇವರೆಲ್ಲರೂ ಒಂದೇ ಆಗಿರುವುದರಿಂದ. ನನ್ನ ಮತ್ತು ನನ್ನ ಸಹೋದರರು ವಿವಾಹ ಮಾಡಿಕೊಂಡಾಗಿನಿಂದಲೂ ನಾವೆಲ್ಲರೂ ಬೇರೆ ಬೇರೆಯಾಗಿ ವಾಸವಾಗಿದ್ದೇವೆ ಎಂದರೆ ಸರಿಯಲ್ಲ.

ನನ್ನ ತಂದೆಯ ಜೀವಿತ ಅವಧಿಯಲ್ಲಿ ವಾಟ್ನಿ ಮಾಡಿಕೊಂಡ ನಂತರ ಡ ನಂ. 1252 ರದ್ದಾದ ನಂತರ ಆ ಆಸ್ತಿಗಳೆಲ್ಲವೂ ನನ್ನ ತಂದೆಯ ಹೆಸರಿನಲ್ಲಿ

ದಾಖಲಾತಿಗಳಲ್ಲಿ ಆತ ಮೃತಪಡುವವರಗೊ ಮುಂದುವರೆದಿರುವವು ಎಂದರೆ ಸರಿಯಲ್ಲ. ನನ್ನ ತಂದೆ ಮೃತಪಡುವವರಗೊ ಆತನ ಆಸ್ತಿಗಳನ್ನು ಆತನೇ



ವಹಿವಾಟು ಮಾಡುತ್ತಿದ್ದನು ಎಂದರೆ ಸರಿಯಲ್ಲ. ನನ್ನ ತಂದೆ ಮೃತಪಡುವವರಗೊ ಗ್ರಾಮದಲ್ಲಿ ಹಿರಿತನ ಮಾಡುವುದು, ಪಂಚಾಯತಿ ಮಾಡುವುದು ಮತ್ತು ಬೇರೆಯವರ ಪ್ರಕರಣಗಳಲ್ಲಿ ಸಾಕ್ಷಿ ನುಡಿಯುತ್ತಿದ್ದನು ಎಂದರೆ ಸರಿಯಲ್ಲ. ನನ್ನ ತಂದೆಗೆ ಕಣ್ಣು ಕಾಣದೆ ಇರುವುದರಿಂದ ಕುಟುಂಬದ ಹಿರಿತನವನ್ನು 1 ನೇ ಪ್ರತಿವಾದಿಗೆವಹಿಸಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಡ ನಂ. 1252 ರದ್ದಾದ ನಂತರ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವಂತಹ ಆಸ್ತಿಗಳಿಗೆ ಆತನ ಹೆಸರುಗಳು ದಾಖಲೆಗಳಲ್ಲಿ ಮುಂದುವರೆದವು ಎಂದರೆ ಸರಿಯಲ್ಲ.

ಈ ದಾವೆ ದಾಖಲು ಮಾಡುವ ಪೂರ್ವದಲ್ಲಿ ಹಾವೇರಿಯ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ನಂ. 115-2014 ರ ದಾವೆ ದಾಖಲು ಮಾಡಿದ್ದೇನೆ ಎಂದರೆ ಸರಿ.ಆ ದಾವೆಯಲ್ಲಿ ಈ ದಾವೆಯಲ್ಲಿನ 1 ನೇ ಪ್ರತಿವಾದಿ ವತುುತ ಆತನ ಹೆಂಡತಿ ಲಿಖಿತ ಪತ್ರವನ್ನು ಸಲ್ಲಿಸಿರುವವರು ಎಂದರೆ ಸರಿಯಲ್ಲ ಅವರು ಲಿಖಿತ ಪತ್ರ ಸಲ್ಲಿಸಿದರೂ ಸಹಿತ ಸಲ್ಲಿಸಿರುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸ ರಿಯಲ್ಲ. ಆ ದಾವೆಯಲ್ಲಿನ ಲಿಖತ ಪತ್ರದಲ್ಲಿ ಹಾಗು ಈ ದಾವೆಯ ಲಿಖಿತ ಪತ್ರದಲ್ಲಿ ಅವರು ಆರ್ ಎಸ್ ನಂ 76ಃ1 ಬಿ , 50ಃ14 , 45ಃ1 , 74ಃ5, 58ಃ1 , 37ಃ1 ಮತ್ತು 76ಃ1 ಎ ಹಾಗೂ ದಾವಾ ಶೆಡ್ಯೂಲ್ ಬಿ ದಲ್ಲಿನ ವಿಪಿಸಿ ನಂ. 90, 91 ಹಾಗೂ 22 ಇವುಗಳು ಪ್ರತಿವಾದಿ 1 ,2,8

ಮತ್ತು ಅವರ  ಮಕ್ಕಳ ಸ್ವಯಾರ್ಜಿತ ಆಸ್ತಿಯಂದು ಹೇಳಿ ಬರೆಸಿದದರೂ ಎಂದರೆ ಸರಿಯಲ್ಲ. ಈ  ಕಾರಣದಿಂದ ಅವರ ಆಸ್ತಿಯಲ್ಲಿ  ಪಾಲು ಸಿಗುವುದ್ದಿಲವೆಂದು ಖಚಿತವಾದ ನತಂರ ನಾನು ನಮ್ಮ ಗ್ರಾಮದ ಹಿರಿಯರ ಮುಂದೆ ಹೋಗಿ ನನ್ನ



ತಂದೆಯ ಆಸ್ತಿಯಲ್ಲಿ ಮಾತ್ರ ಹಿಸ್ಸೆ ಕೊಡಿಸಿರೆಂದು ಹಿಂಬಾಲು ಬಿದಿದ್ದೆನೆಂದರೆ ಸರಿಯಲ್ಲ. ಆ ದಾವೆಯನ್ನು ಹಿಂಪಡೆಯುವಂತೆ  8 ನೇ ಪ್ರತಿವಾದಿಯು ನನಗೆ ಹೇಳಿದ್ದು ಹಾಗೂ ಹಿಸ್ಸೆ ನೀಡುವುದಾಗಿ ಎಂದು  ಹೇಳಿರುವುದರಿಂದ ಆ ಕಾರಣದಿಂದ ನಾನು ಅದನ್ನು  ಹಿಂಪಡೆದುಕೊಂಡಿರುವೆನು. ಆ ದಾವೆಯನ್ನು ಹಿಪಡೆಯುವ ಸಮಯದಲ್ಲಿ ಈ  ಹೇಳಿ ಯಾವುದೆ ಅರ್ಜಿ ನೀಡಿರುವುದಿಲ್ಲ ಎಂದರೆ ಸರಿ. ಆ ದಾವೆಯನನ್ನು  ಹಿಪಡೆಯಲು ನಾನು ವಕೀಲರ ಮೂಲಕ ಅರ್ಜಿಯನ್ನು  ಹಿಂಪಡೆಯಲುನ್ಯಾಯಾಲಯದಲ್ಲಿ ಸಲ್ಲಿಸಿದ್ದೇನೆ  ಎಂದರೆ ಸರಿಯಲ್ಲ. ನಾನೇ ಖುದ್ದಾಗಿ ಅರ್ಜಿ ನೀಡಿರುವೆನು. ಆ ದಾವೆಯನ್ನು ಹಿಂಪಡೆಯಲು  8 ನೇ ಪ್ರತಿವಾದಿ ನನಗೆ ಹೇಳಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಆಸ್ತಿಯಲ್ಲ ಹಿಸ್ಸೆಯನ್ನು ಪಡೆದುಕೊಂಡ ಆ ಕಾರಣದಿಂದ  ಆ ದಾವೆಯಲ್ಲಿ ನಾನು ಅದನ್ನು ಹಿಂಪಡೆಯುವುದಾಗಿ ಎಂದು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.  ನಾನು ಈ ದಾವೆಯನ್ನು ದಾಖಲು ಮಾಡಲು ಕಾರಣವನ್ನು  ನಮ್ಮ ವಕೀಲರಿಗೆ ಹೇಳಿರುವೆನು ಆ ಮೊದಲಿನ ದಾವೆಯನ್ನು ಹಿಂತೆಗೆದುಕೊಳ್ಳಲು ಹೇಳಿರುವಂತೆ ನನಗೆ ಆಸ್ತಿಯಲ್ಲಿ ಹಿಸ್ಸೆ ನೀಡದ ಕಾರಣ ಆ ಕಾರಣದಿಂದ ಈ ದಾವೆಯನ್ನು ದಾಖಲು ಮಾಡುತ್ತಿರುವನೆಂದು ನಮ್ಮ ವಕೀಲರಿಗೆ ಹೇಳಿರುವೆನು. ಪ್ರತಿವಾದಿ 1 , 8 , 3, 4 ಇವರೆಲ್ಲರೂ ನನಗೆ ಪಾಲುನೀಡುವುದಿಲ್ಲ ಎಂದು ಹೇಳಿದರೂ ಆ ಕಾರಣದಿಂದ ನಾನು ಈ  ದಾವೆ ಮಾಡಿದ್ದೇನೆ.  ಈ ಸಂಗತಿಯನ್ನು ನನ್ನ ವಾದಪತ್ರದಲ್ಲಿ ಹೇಳಿ ಬರೆಸಿಲ್ಲ ಎಂದರೆ ಸರಿ.  ನಾನು ಸಾಗುವಳಿ ಮಾಡಲು ಹೋಗಿರುವಂತಹ

ಜಮೀನಿನ ಸರ್ವೆ ನಂಬರ ವಿಸ್ತೀರ್ಣ ಹೇಳಲು ಬರುವುದಿಲ್ಲ ಆದರೆ ಅದು 1 ಎಕರೆ 11 ಗುಂಟೆಯ ವಿಸ್ತೀರ್ಣ ಅಗಿರಬಹುದು. ಆ ಜಮೀನಿನ ಸಾಗುವಳಿಗೆ ಪ್ರತಿವಾದಿ 8,1 ,3 ರವರು ಮಾಡಿರುವರು. ಈ ದಾವೆಯನ್ನು ದಾಖಲು ಮಾಡುವ



ಸಮಯದಲ್ಲಿ ವಾದಪತ್ರದಲ್ಲಿ ಈ ಸಂಗತಿಯನ್ನು ಹೇಳಿ ಬರೆಸಿಲ್ಲ ಎಂದರೆ ಸ ರಿ

ನಾನು ಪ್ರತಿವಾದಿ 3 ಮತ್ತು 4 ರವರು ಕೂಡಿಕೊಂಡು ಪ್ರತಿವಾದಿ 1 ಮತ್ತು ಅತನ ಹೆಂಡತಿ ಮಕ್ಕಳ ಹೆಸರಿನಲ್ಲಿ ಇರುವಂತಹ ಆಸ್ತಿಗಳನ್ನು ಈ ಸುಳ್ಳು ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ವಂಶಾವಳಿಯಲ್ಲಿ ತೋರಿಸಿರುವಂತೆ ನನ್ನ ಮೃತ ಸಹೋದರಿ ಆಶಾಬಿ ಇವಳ ಎಲ್ಲ ಮಕ್ಕಳನ್ನು ಸೇರಿಸದೆ ಕೇವಲ ಗಂಡುಮಗ ಸೈಯದ ಅಹಮದ ಅವನನ್ನು 7 ನೇ ಪ್ರತಿವಾದಿಯನ್ನಾಗಿ ಮಾತ್ರ ಮಾಡಿರುವೆನು ಎಂದರೆ ಸರಿಯಲ್ಲ

9 ಮತ್ತು 10 ನೇ ಪ್ರತಿವಾದಿಯರು ಪಾಟೀ ಸವಾಲಿಗಾಗಿ ಸಮಯ ಬೇಡಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ
(ಸ್ಥಳ ಸವಣೂರ)